ಜಾಣರ ಪೆಟ್ಟಿಗೆ

ವಾರದ ಪತ್ರ

## ವರ್ತಮಾನವ ಮರೆತರೇನು ಸುಖವಿದೆ...



ಝೀ ಕನ್ನಡದ 'ಸೀತಾರಾಮ'ದಲ್ಲಿ ನಾಯಕ ರಾಮ್ ರೆಸ್ಟೋರೆಂಟ್ ಬಿಲ್ ಕಟ್ಟಲು ನಗದು ಹಣವಿಲ್ಲವೆಂದು ಪರದಾಡುತ್ತಾನೆ. ಏನು ಮಾಡುವುದೆಂದು ತೋಚದೆ ಕೊನೆಗೆ ಮಿತ್ರನಿಗೆ ಆನ್‌ಲೈನ್‌ನಲ್ಲಿ ಬಿಲ್ ಪಾವತಿಸಲು ಮೆಸೇಜ್ ಮಾಡುತ್ತಾನೆ.

ಯು.ಪಿ.ಐ. ಪೇಮೆಂಟ್/ಕಾರ್ಡ್ ಪೇಮೆಂಟ್ ವ್ಯವಸ್ಥೆ ತರಕಾರಿ ಮಾರುಕಟ್ಟೆಯಲ್ಲಿಯೂ ಪ್ರವೇಶ ಮಾಡಿದೆ. ಆದರೆ ನಾಯಕನಿಗೆ ಅದು ಏಕೆ ಸಾಧ್ಯವಾಗುವುದಿಲ್ಲ? ಕಥೆಗೆ ಪೂರಕವಾಗುವ ಸನ್ನಿವೇಶವೇ ಇದಾಗಿರಬಹುದು. ಆದರೂ ಸಮಕಾಲೀನತೆಗೆ ಮೋಸವಾಗದಂತೆ ಧಾರಾವಾಹಿಯ ತಂಡ ನೋಡಿಕೊಂಡರೆ, ಪುಟಾಣಿ ರೀತೂಸಿಂಗ್ ಮತ್ತಿತರರ ಲವಲವಿಕೆಯ ನಟನೆಯಿಂದ ಈಗಾಗಲೇ ಜನಪ್ರಿಯತೆ ಪಡೆದಿರುವ ಧಾರಾವಾಹಿ ಅದನ್ನು ದೀರ್ಘಕಾಲ ಉಳಿಸಿಕೊಳ್ಳಬಲ್ಲುದು!

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

## ವಿಷಯವಷ್ಟೇ ಅಲ್ಲ, ಶೀರ್ಷಿಕೆಯಲ್ಲೂ ಸೊಗಸಿರಲಿ

ಮುಂಜಾನೆ ಟೀವಿ ಹಾಕಿ 'ಸಿರಿ ಕನ್ನಡ' ಚಾನಲ್ ಆನ್ ಮಾಡಿದ ತಕ್ಷಣ 'ನಿಗೂಢ ರಹಸ್ಯ' ಎಂದು ದೊಡ್ಡ ದನಿಯಲ್ಲಿ, ಕರ್ಕಶ ಹಿನ್ನೆಲೆ ಸಂಗೀತದ ಜೊತೆ ಶುರು ಆಯಿತು. ನಿರೂಪಕರೂ ಭಯಪಡಿಸುವಂತೆ ಇದ್ದರು. ಮುಂದಿನ ಚಾನಲ್ ತಿರುಗಿಸೋಣ ಎಂದುಕೊಂಡು ಧೈರ್ಯ ಮಾಡಿ ನೋಡೋಣವೆಂದು ಕುಳಿತೆ. ಅದು ಒಳ್ಳೆಯ ಕಾರ್ಯಕ್ರಮ ಎಂದು ಗೊತ್ತಾಯಿತು.

ಶಿವಮೊಗ್ಗ ಜಿಲ್ಲೆಯ ಸಂಸ್ಕೃತ ಗ್ರಾಮ ಮತ್ತೂರಿನ ಪರಿಚಯ ಮಾಡಿದರು. ಇಲ್ಲಿನ ಹೆಚ್ಚಿನ ಕುಟುಂಬಗಳು, ವ್ಯಾಪಾರಸ್ಥರು ಸಂಸ್ಕೃತದಲ್ಲಿ ಮಾತನಾಡುತ್ತಾರೆ. ಕರ್ನಾಟಕದ ಸಂಸ್ಕೃತ ಗ್ರಾಮ ಎಂದು ಹೆಸರುವಾಸಿಯಾಗಿದೆ. ಕಾವ್ಯಗಳನ್ನು ಹಾಡುವ ಅನನ್ಯ ಪ್ರಕಾರವಾದ ಗಮಕ ಕಲೆಯನ್ನು ದೇಶವಿದೇಶಗಳಲ್ಲಿ ಪರಿಚಯಿಸಿದ ವಿದ್ವಾಂಸರು ಮತ್ತೂರು ಕೃಷ್ಣಮೂರ್ತಿಯವರು ಇದೇ ಗ್ರಾಮದವರು. ಆದರೆ ಶೀರ್ಷಿಕೆ, ನಿರೂಪಣೆಯ ಧಾಟಿ ಬದಲಿಸಿದರೆ ಜನ ಮೆಚ್ಚುವ ಕಾರ್ಯಕ್ರಮ ಆಗುತ್ತದೆ.

—ವೀಣಾ ಶಂಕರ್, ಬೆಂಗಳೂರು

## ಲೆಕ್ಕ! ಇರಬೇಕು ಪಕ್ಕಾ...

ಚಂದನದ 'ಥಟ್ ಅಂತ ಹೇಳಿ' ಚೆನ್ನಾಗಿ ಮೂಡಿಬರುತ್ತಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಇದರಲ್ಲಿ ಭಾಗವಹಿಸುವ ಸ್ಪರ್ಧಿಗಳಿಗೆ ವಯಸ್ಸು ಮತ್ತು ಲಿಂಗಭೇದವಿಲ್ಲ. ಖೇದದ ಸಂಗತಿ ಎಂದರೆ ಲೆಕ್ಕದ ಪ್ರಶ್ನೆಗೆ ಯಾರೂ ಸರಿಯಾಗಿ ಉತ್ತರ ನೀಡುವುದಿಲ್ಲ. ಅಧ್ಯಾಪಕರು, ವಿದ್ಯಾರ್ಥಿಗಳೂ ಸರಿಯಾದ ಉತ್ತರ ನೀಡಿದ್ದು ಅಪರೂಪ. ಬಾಯಿಲೆಕ್ಕದ ಈ ಪ್ರಶ್ನೆ ಬಹಳ ಸುಲಭ ಇರುತ್ತವೆ. ಉತ್ತರಿಸಲು ಯಾವ ಪೂರ್ವಸಿದ್ಧತೆಯೂ ಬೇಡ. ಸರಿಯಾದ ಉತ್ತರ ಕೊಟ್ಟಲ್ಲಿ ಬಹುಮಾನ ಖಚಿತ. ಹೀಗಿದ್ದರೂ ತಪ್ಪಾಗುತ್ತಿದೆ ಅಂದರೆ ನಮ್ಮ ಲೆಕ್ಕಾಚಾರದ ತಿಳಿವಳಿಕೆಯೂ ಕ್ಷೀಣಿಸುತ್ತಿದೆ ಎಂದರ್ಥ. ಇದನ್ನು ನೋಡಿದಾಗ ಶೈಕ್ಷಣಿಕವಾಗಿ ಗಣಿತದ ಮಹತ್ವ ಇನ್ನೂ ಹೆಚ್ಚಿದೆ ಎಂದು ಅನ್ನಿಸುತ್ತದೆ.

—ಅರುಣ್ ಕೆ. ಎನ್., ಬೆಂಗಳೂರು

## ಹೇಳಿ ಹೋಗಿ ಕಾರಣ

ಕನ್ನಡ ಧಾರಾವಾಹಿಗಳಲ್ಲಿ ಕೆಲವು ಪಾತ್ರಗಳು ದಿಢೀರನೆ ಕಣ್ಮರೆಯಾಗಿಬಿಡುತ್ತವೆ. ಆ ಪಾತ್ರಗಳು ಏಕೆ ಕಣ್ಮರೆಯಾದವು ಎಂಬುದಕ್ಕೆ ಧಾರಾವಾಹಿಯಲ್ಲಿ ಯಾವ ಸುಳಿವೂ ದೊರೆಯುವುದಿಲ್ಲ. ಕೆಲವು ಪಾತ್ರಗಳನ್ನು ತೀರ್ಥಯಾತ್ರೆಗೆ ಕಳುಹಿಸಿದರೆ ಅವು ವರ್ಷಗಟ್ಟಲೆ ಹಿಂತಿರುಗಿ ಬರುವುದಿಲ್ಲ.

ಪ್ರಸ್ತುತ ಕಲರ್ಸ್ ಕನ್ನಡದ 'ಲಕ್ಷಣ'ದಲ್ಲಿ ಶಕುಂತಲಾ ದೇವಿಯ ಎರಡನೆಯ ಮಗನ ಹೆಂಡತಿ (ಫಾರಿನ್ ಲೇಡಿ) ಶ್ವೇತಾಳ ಅಕ್ಕನ ಮಗ ಮತ್ತು ನಕ್ಷತ್ರಾಳ ತಂದೆ ಚಂದ್ರಶೇಖರ ಮತ್ತು ಆತನ ಹೆಂಡತಿ ಕಣ್ಮರೆಯಾಗಿದ್ದಾರೆ. 'ಪುಣ್ಯವತಿ'ಯಲ್ಲಿ ಪದ್ಮಿನಿಯ ಚಿಕ್ಕ ತಂಗಿಯ ಪಾತ್ರ ಕಣ್ಮರೆಯಾಗಿದೆ. 'ರಾಮಾಚಾರಿ'ಯಲ್ಲಿ ಜೈಶಂಕರನ ಎರಡನೇ ಹೆಂಡತಿ ಶರ್ಮಿಳಾ ಮತ್ತು ಅವಳ ಮಗಳ ಪಾತ್ರ ಕಾಣೆಯಾಗಿದೆ.

—ಮುರಲೀಧರ ಕುಲಕರ್ಣಿ, ಬೀದರ್

## ಸುದ್ದಿ: ಏನೆಲ್ಲಾ ಅಲ್ಲ...

ಕನ್ನಡ ಸುದ್ದಿ ವಾಹಿನಿಯೊಂದನ್ನು ರಾಷ್ಟ್ರೀಯ ಸುದ್ದಿವಾಹಿನಿಯೊಂದು ಇತ್ತೀಚೆಗೆ ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಆರಂಭದಲ್ಲಿ ಅದರ ಮುಖ್ಯಸ್ಥರು ಮಾರ್ಮಿಕ ಮಾತನ್ನು ಹೇಳಿದ್ದಾರೆ. 'ಸುದ್ದಿ ವಾಹಿನಿ ಎಂದರೆ ವೈರಲ್ ವಿಡಿಯೊಗಳನ್ನು ಪ್ರಸಾರ ಮಾಡುವುದಲ್ಲ. ಜ್ಯೋತಿಷಿಗಳನ್ನು ಕರೆಯಿಸಿ ಕೊರೆಯುವುದಲ್ಲ. ಕೌಟುಂಬಿಕ ಕಲಹಗಳನ್ನು ದಿನವಿಡೀ ತೋರಿಸುವುದಲ್ಲ. ಸೀರಿಯಲ್ ವೃತ್ತಾಂತವನ್ನು ಬಿತ್ತರಿಸುವುದಂತೂ ಅಲ್ಲವೇ ಅಲ್ಲ' — ಇಂತಹ ಅಸಂಬದ್ಧಗಳನ್ನು ನಿಲ್ಲಿಸದಿದ್ದರೆ ಅವುಗಳಿಗೇ ಉಳಿಗಾಲವಿಲ್ಲ ಎಂದಿದ್ದಾರೆ. ಕೆಲವು ಸುದ್ದಿ ವಾಹಿನಿಗಳ ಕಾರ್ಯವೈಖರಿ ನೋಡಿದಾಗ ಅವರ ಮಾತಿನಲ್ಲಿ ತಥ್ಯವಿದೆ ಎನಿಸಿತು. ಮುಂದುವರಿದು ವಿಐಪಿ ಕುಟುಂಬದ ಮದುವೆ, ಜನ್ಮದಿನದ ಸಂಭ್ರಮವೂ ದಿನಗಟ್ಟಲೆ ಪ್ರಸಾರ ಮಾಡುವ ವಿದ್ಯಮಾನ ಅಲ್ಲ ಎನ್ನುವುದನ್ನು ಸೇರಿಸಬೇಕು ಎಂದು ಅನಿಸಿತು.

—ರಮಾನಂದ ಶರ್ಮಾ, ಬೆಂಗಳೂರು

## ವಿಷಯದ ಆಳ ತಿಳಿಯದೇ ಕೊರತೆ

ಟೀವಿ ವಾಹಿನಿಗಳು ವಿವಿಧ ಪಕ್ಷಗಳ ವಕ್ತಾರರನ್ನು ಆಹ್ವಾನಿಸಿ ಬೇರೆ ಬೇರೆ ವಿಷಯಗಳ ಮೇಲೆ ಚರ್ಚೆ ನಡೆಸುತ್ತಾರೆ. ವಕ್ತಾರರು ವಿಷಯದ ಗಂಭೀರತೆಯನ್ನು ಅರಿಯದೆ, ಆಳಕ್ಕಿಳಿಯದೆ ಟೈಂ ಪಾಸ್ ಮಾಡುತ್ತಾರೆ. ಒಬ್ಬರು ಮಾತನಾಡುವಾಗ ಇನ್ನೊಬ್ಬರು ಮಧ್ಯದಲ್ಲಿಯೇ ಬಾಯಿಹಾಕುತ್ತಾರೆ. ಈ ಬಗ್ಗೆ ಕಾರ್ಯಕ್ರಮ ನಿರ್ವಾಹಕರು ಮತ್ತು ಚಾನಲ್ ವಿಷಯಾಧಾರಿತ ಚರ್ಚೆಗೆ ಗಮನ ನೀಡಬೇಕು. ಕಾರ್ಯಕ್ರಮ ನಿರೂಪಕರೂ ವಿಷಯವನ್ನು ತಿಳಿಯದೇ ಮಾತನಾಡುವುದು ಒಂದು ಕೊರತೆ.

—ಸಿಹಿಮೊಗೆ ರಮೇಶ್, ಮೈಸೂರು

## ಕುತೂಹಲ ದೃಶ್ಯ ಕಾವ್ಯ ಅರಳಲಿ

ಝೀ ಕನ್ನಡದ 'ಹಿಟ್ಲರ್ ಕಲ್ಯಾಣ' ವರ್ಷಗಳಿಂದ ಪ್ರಸಾರವಾಗುತ್ತಿದೆ. ಅಸಂಬದ್ಧ ಕಥೆ ಹಳಿತಪ್ಪಿ ತುಂಬ ದಿನಗಳೇ ಆಗಿವೆ. ನಾಯಕ ವಿಧುರ, ಆತ ಎರಡನೇ ಮದುವೆಯಾಗುತ್ತಾನೆ. ಪತ್ನಿಯ ಬಾಲಿಶ ನಡವಳಿಕೆ, ಆತನ ಇಬ್ಬರ ಸೊಸೆಯರ ಕಪಟ ನಾಟಕ, ಗಂಡು ಮಕ್ಕಳಿಬ್ಬರೂ ನೆಪದ ಪಾತ್ರ ಮತ್ತಷ್ಟು ಅನರ್ಥವನ್ನು ಸೃಷ್ಟಿಸಿದೆ. ಇಷ್ಟು ಸಾಲದು ಎನ್ನುವಂತೆ ಆತನ ಜೀವನದಲ್ಲಿ ಮೊದಲ ಪತ್ನಿಯನ್ನೇ ಹೋಲುವ ಮಹಿಳೆ ಒಬ್ಬರ ಪ್ರವೇಶವಾಗುತ್ತದೆ. ಆದರೆ ಅದು ಊರಿಗೆಲ್ಲ ಗೊತ್ತಾದರೂ ಮನೆಯಲ್ಲಿ ನಿಗೂಢವಾಗಿಯೇ ಉಳಿದಿದೆ.

ತಲೆ ಬುಡ ಇಲ್ಲದ ಕಥೆಯನ್ನು ಬರೆಯುತ್ತಿದ್ದಾರೆ ಎಂದೆನಿಸುತ್ತಿದೆ. ಕನ್ನಡ ಸಾಹಿತ್ಯದಲ್ಲಿ ಸಾಂಸಾರಿಕ ಜೀವನ ಚಿತ್ರಿಸುವ ಕಥೆಗಳಿಗೆ ಬರವಿಲ್ಲ. ಅದರ ಆಧಾರದ ಮೇಲೆ ಅರ್ಥಪೂರ್ಣ ಧಾರಾವಾಹಿ ಮಾಡುವ ಪ್ರಯತ್ನವನ್ನು ಮಾಡಬಹುದು. ವರ್ಷಗಳಾದರೂ ಮುಗಿಯದ ಇಂತಹ ಅರ್ಥಹೀನ ಕಥೆಯನ್ನು ನಿಲ್ಲಿಸಿ. ಕನ್ನಡ ಸಾಹಿತ್ಯದಲ್ಲಿರುವ ಸೊಗಸಾದ ಕಥೆ, ಕಾದಂಬರಿಗಳನ್ನು ತೆಗೆದುಕೊಂಡು ಕುತೂಹಲದ ದೃಶ್ಯ ರೂಪ ನೀಡಲಿ.

—ವಿ. ಸುರೇಶ್, ಹುಬ್ಬಳ್ಳಿ